

ಸಲುವಾಗಿ ಮೂರ ದಿನಾ ನಿದ್ದಿಗೆಟ್ಟಿದ್ದೆ. ನನ್ನ ಅರ್ಧಾ ದಿನದ ಕೆಲಸಾನ ಪೆಂಡಿಂಗ್ ಉಳದು ನನ್ನ ಕ್ಲಯಂಟಗೆ ಸುಳ್ಳು ಹೇಳಬೇಕಾತು. ಆದರೂ ನಿನ್ನ ಗೆಳತಿ ಆ ರೋಜಿಯ ಪ್ರಾಜೆಕ್ಟಿಗೇ ಹೆಚಿಗೀ ಮಾರ್ಕ್ಸ್ ಬಂದವು. ಇನ್ನ ಮುಂದ ನಾ ಅಂತೂ ನಿನ್ನ ಪ್ರಾಜೆಕ್ಟ್ ಮಾಡಂಗಿಲ್ಲಾ.'

ನನ್ನ ಮಗಳು ತನ್ನ ಮಗಳೆದುರು ತನ್ನ ಕೋಪ ಹಾಗೂ ಹತಾಶೆಯನ್ನು ತೋರಿಸಿದ್ದಳು. 'ಮಮ್ಮಾ, ನೀ ಥೊಲೋನ ಮಾಡಿದ್ದಿ. ನಾ ಎಲ್ಲೆ ಇಲ್ಲಂತೇನಿ? ಆದರ ಆ ರೋಜಿ ಪಪ್ಪಾ ಏನ ಮಾಡಿದ್ರು ಗೊತ್ತದ ಏನು ಫರ್ಸ್ಟ್ ಬರಲಿಕ್ಕೆ?'

'ಅಂಥಾದೇನ ಮಾಡಿದ್ರು?'

'ನಮ್ಮ ಪ್ರಾಜೆಕ್ಟ್ ಹಲ್ಲಿನ ಸ್ಟ್ರಕ್ಚರ್ ಅಂತ ಇತ್ತಲಾ? ಅವ್ರು ಹಲ್ಲಿನ ಚಿತ್ರದ ಬದಲಿ ತಮ್ಮ ತಂದೆಯ ಹಲ್ಲು ಹಚ್ಚಿದ್ರಂತ. ಅಂದ್ರ ರೋಜೀ ತಾತಾಂದು. ತಾತಂದು ಹಲ್ಲು ಎರಡ ದಿನದ ಹಿಂದ ಬಿದ್ದಿತ್ತಂತ. ಅದನ್ನ ರೋಜಿಯ ಪಪ್ಪಾ ಸ್ವಚ್ಛ ತೊಳದು ಅಂಟಿಸಿದ್ದರಂತ. ಅದಕ್ಕ ಅದು ಅಗದೀ ನ್ಯಾಚುರಲ್ ಆಗಿತ್ತಂತ. ನಮ್ಮ ಬಯಾಲಜಿ ಮೇಡಂ ಅಪ್ರಿಶಿಯೇಟ ಮಾಡಿದ್ರು. ನಾವು ಪ್ಲಾಸ್ಟಿಕ್ ಹಲ್ಲು ಅಂಟಿಸಿದ್ವೆಲ್ಲಾ, ಅದಕ್ಕ ಅದು ಸೆಕೆಂಡ್!'

ನನಗೆ ದಿಗಿಲಾಗಿತ್ತು, ಈಗ ನಾಲ್ಕು ದಿನಗಳ ಹಿಂದೆ ನಾವಿಬ್ಬರೂ ಬಂದಿದ್ದರೆ ಎಂದುಕೊಂಡು ನನ್ನ ಗಟ್ಟಿ ಹಲ್ಲುಗಳನ್ನು ಮುಟ್ಟಿ ನೋಡಿಕೊಂಡಿದ್ದೆ!

ಇದೇನ ಪ್ರಾಜೆಕ್ಟವಾ? ನಾವು ಸಣ್ಣವರಿದ್ದಾಗ ಪ್ರಾಜೆಕ್ಟ್ ಅಂದರ ಭಾಕ್ರಾ ನಾಂಗಲ್ ಪ್ರಾಜೆಕ್ಟ್ ಬಿಟ್ಟು ಬ್ಯಾರೆ ಹೆಸರು ಗೊತ್ತಿದ್ದಿಲ್ಲಾ. ನಾ ಅಂತೂ ಹೇಳಿಕೇಳಿ ಅಜ್ಜಿ! ನನ್ನ ಮಗಳು ಪ್ರೈಮರಿ ಶಾಲೆಯಲ್ಲಿ ಕಲಿಯುವಾಗ ಕೂಡ ಈ ಪ್ರಾಜೆಕ್ಟ್ ವರ್ಕ್ ಅಂತೆಲ್ಲಾ ಏನೇನೂ ಇರತಿರಲಿಲ್ಲ. ಆಕೆಯ ಪ್ರಾಜೆಕ್ಟ್ ವರ್ಕ್ ಏನೇ ಇದ್ದರೂ ಅವಳು ಆರ್ಕಿಟೆಕ್ಚರ್ ಕಲಿಯುವಾಗಲೇ ಪ್ರಾರಂಭವಾಗಿತ್ತು.

ಹೀಗಾಗಿ ನನಗೆ ಈ ಚಿಕ್ಕ ಮಕ್ಕಳ, ಅಂದರೆ ಪ್ರೈಮರಿ ಸ್ಕೂಲ್ ಮಟ್ಟದ ಮಕ್ಕಳ ಪ್ರಾಜೆಕ್ಟ್ ವರ್ಕ್ ಬಗ್ಗೆ ಏನೂ ಗೊತ್ತಿರಲಿಲ್ಲ.

'ಏನವಾ ಅದೂ ಪ್ರಾಜೆಕ್ಟ್ ವರ್ಕೂ? ಅದೂ ಇಷ್ಟು ಸಣ್ಣ ಕ್ಲಾಸಿನವ್ರಿಗೆ?'

'ಅವ್ವಾ, ನಿಂಗಿದೆಲ್ಲಾ ಗೊತ್ತಾಗಂಗಿಲ್ಲಾ. ಈಗಿನ ಹುಡುಗೂರಿಗೆ ಟ್ರೈಮೆಸ್ಟರ್ ಸಿಸ್ಟಮ್ ಮಾಡಿರತಾರ. ಈಗಿನ ಶಿಕ್ಷಣ ಪದ್ಧತಿ ಬದಲಾಗೇದ. ಮಕ್ಕಳು ಪ್ರತ್ಯಕ್ಷ ಅನುಭವದಿಂದ ಕಲೀಲಿ ಅಂತ ಶಿಕ್ಷಣ ತಜ್ಞರು ಹೇಳತಾರ. ಅದರಾಗ ಕೆಲವು ಪ್ರತ್ಯಕ್ಷ ಪ್ರಾಜೆಕ್ಟ್ ಮಾಡಲಿಕ್ಕೆ ಹೇಳಿರತಾರ. ಅದಕ್ಕ ಮಾರ್ಕ್ಸ್ ಇರತಾವ. ಖರೆ ಹೇಳಬೇಕೆಂದರೆ ಇದು ಮಕ್ಕಳಿಗೆ ಮಾಡಲಿಕ್ಕೆ ಬರೋ ಪ್ರಾಜೆಕ್ಟ್ ಅಲ್ಲವೇ ಅಲ್ಲಾ. ಇದು ತಾಯಿ ತಂದೀ ಪ್ರಾಜೆಕ್ಟ್ ಇದ್ದಂಗನ. ಈ ಮಾರ್ಕ್ಸ್‌ಗೆ ಕಾಂಪಿಟೇಶನ್. ಅದರ ಸಲುವಾಗಿ ಬೇಕಾದಷ್ಟು ಖರ್ಚು ಮಾಡತಾರ. ನಾವು ಪ್ಲಾಸ್ಟಿಕ್ ಹಲ್ಲು ಹಚ್ಚಿದ್ವಿ. ಇಕೀ ಗೆಳತಿ ಮನ್ಯಾಗ ತಾತನ ಹಲ್ಲು ಹಚ್ಚ್ಯಾರ. ಹಿಂಗ ಆಗಿ ಇಕೀ ನಂಬರ್ ತಪ್ಪೇದ...'



ಈಗೆಲ್ಲಾ ಆನ್ ಲೈನಲ್ಲೇ...

'ಅಲ್ಲಾ, ಏನ ಗತಿ ಬಂತವಾ? ಕಣ್ಣಿನ ಪ್ರಾಜೆಕ್ಟ್ ಕೊಟ್ಟಿದ್ರ? ಯಾರ ಕಣ್ಣು ಕಿತ್ತಿತರತಿದ್ರವಾ ಇವ್ರು? ನಮ್ಮ ಕಾಲದಾಗ ಇವೆಲ್ಲಾ ಎಲ್ಲಿದ್ವವಾ? ಹೋಮ್‌ವರ್ಕ್ ಮಾಡಿಸಿದರ ಮುಗದ ಹೋಗತಿತ್ತು ನಮ್ಮ ಜವಾಬ್ದಾರಿ!'

'ಅಜ್ಜಿ, ನಮ್ಮ ಪ್ರಾಜೆಕ್ಟ್ ವರ್ಕ್ ಮಮ್ಮಾ ಮಾಡತಾಳ. ಹಂಗ ಮಮ್ಮಾನ ಹೋಮವರ್ಕ್ ನೀ ಮಾಡತಿದ್ಯೋ ತಾತಾ ಮಾಡತಿದ್ನೋ?'

'ಅಯ್ಯ ನಾವ್ಯಾಕ ಮಾಡತಿದ್ವೇ ನಮ್ಮವ್ವಾ? ಅಕೀನ ಮಾಡಾಕಿ. ನಾವು ಬರೇ ಮಾಡಸತಿದ್ವೀ. ಆಗಿನ ಕಾಲದಾಗ ಪ್ರಾಜೆಕ್ಟ್ ಗೀಜೆಕ್ಟ ಅಂತ ಇರಲಿಲ್ಲ. ಸಾಲ್ಯಾಗ ಅವತ್ತು ಹೇಳಿಕೊಟ್ಟದ್ದನ ಹೋಮವರ್ಕ್ ಹೇಳಿರತಿದ್ರು. ಇವರು ಮಾಡಿದ ಎಲ್ಲಾ ಅಭ್ಯಾಸ ಅವರು ಚೆಕ್ ಮಾಡತಿದ್ರು. ಕೆಳಗ ಗುಡ್, ವೆರಿ ಗುಡ್ ಅಂತ ಬರದು ಸಹಿ ಮಾಡಿದ್ರ ಮುಗೀತು!'

ಮಗಳು ಗಬಗಬನೆ ಊಟ ಮಾಡಿ ತನ್ನ ಸ್ಕೂಟಿ ತೆಗೆದು ಮಗಳೊಂದಿಗೆ ಹೊರಟಿದ್ದಳು, ಮುಂದಿನ ಪ್ರಾಜೆಕ್ಟ್‌ಗೆ ಬೇಕಾದ ವಸ್ತುಗಳನ್ನು ತರಲು.

ಮುಂದಿನ ಪ್ರಾಜೆಕ್ಟ್ ಹೃದಯದ್ದು! ನನ್ನೆದೆ ಜೋರಾಗಿ ಬಡಿದುಕೊಂಡಿತ್ತು! ■

